# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 830 |
| ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13.07.2023 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಜನರಿಗೆ ಕುಡಿಯುವ ನೀರನ್ನು ನೀಡುವ ಉದ್ದೇಶದಿಂದ ಮಾಲವಿ ಜಲಾಶಯಕ್ಕೆ ಪೈಪ್‌ಲೈನ್ ಮೂಲಕ ನೀರನ್ನು ತರಲು ಒಟ್ಟು ಖರ್ಚು ಮಾಡಲಾದ ಹಣ ಎಷ್ಟು; ಈ ಯೋಜನೆಯಿಂದ ಆದ ಉಪಯೋಗವೇನು; (ಮಾಹಿತಿ ನೀಡುವುದು) | ಮಾಲವಿ ಜಲಾಶಯದ ಒಳ ಹರಿವಿನಲ್ಲಿ ಉಂಟಾದ ನೀರಿನ ಕೊರತೆಯನ್ನು ನೀಗಿಸಲು ಉದ್ದೇಶದಿಂದ ತುಂಗಭದ್ರಾ ನದಿಯಿಂದ ನೀರನ್ನೆತ್ತಿ ಮಾಲವಿ ಜಲಾಶಯಕ್ಕೆ ನೀರು ತುಂಬಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.<br>ಸದರಿ ಯೋಜನೆಗೆ ಇದೂವರೆಗೆ ರೂ.124.58 ಕೋಟಿ ವೆಚ್ಚವಾಗಿರುತ್ತದೆ. |
| ಆ. | ಈ ಮಾಲವಿ ಜಲಾಶಯದ ಗೇಟ್‌ಗಳ ದುರಸ್ತಿಯಿಂದ ನೀರು ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು: ಯಾವ ಕಾಲಮಿತಿಯಲ್ಲಿ ಇದನ್ನು ಸರಿಪಡಿಸಲಾಗುವುದು; | ಸುಮಾರು 13 ವರ್ಷಗಳಿಂದ ಮಾಲವಿ ಜಲಾಶಯ ಭರ್ತಿಯಾಗಿರುವುದಿಲ್ಲ. ಹಲವಾರು ವರ್ಷಗಳಿಂದ ಜಲಾಶಯವು ಭರ್ತಿಯಾಗದೇ ಇದ್ದಿದ್ದರಿಂದ ಗೇಟ್‌ಗಳನ್ನು ಹೆಚ್ಚಾಗಿ ಕಾರ್ಯಾಚರಣೆ ಮಾಡಿರುವುದಿಲ್ಲ.<br>2022-23ನೇ ಸಾಲಿನಲ್ಲಿ ಜಲಾನಯನ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದ್ದರಿಂದ, ಒಳ ಹರಿವು ಹೆಚ್ಚಾಗಿ, ಜಲಾಶಯವು ಭರ್ತಿಯಾಗಿ ಹೆಚ್ಚುವರಿಯಾಗಿ ನೀರನ್ನು ಹೊರ ಬಿಡಲು ಕ್ರಸ್ಟ್ ಗೇಟ್‌ಗಳನ್ನು ಎತ್ತುವ ಮತ್ತು ಇಳಿಸುವ ಸಂದರ್ಭದಲ್ಲಿ ರೋಲರ್‌ಗಳು ಜಾಮ್ ಆಗುತ್ತಿರುವುದು ಕಂಡು ಬಂದಿರುತ್ತದೆ. ಅಲ್ಲದೆ, ಅಣೆಕಟ್ಟು ನಿರ್ಮಾಣದ ಸಂದರ್ಭದಲ್ಲಿ ಅಣೆಕಟ್ಟಿನ ಪಿಯರ್‌ಗಳ ಸಿವಿಲ್ ಚೇಂಬರ್‌ಗಳಿಂದ ರೋಲರ್‌ಗಳನ್ನು ಹೊರ ತೆಗೆದು ಕಾಲಕಾಲಕ್ಕೆ ಅವುಗಳ ಬೇರಿಂಗ್‌ಗಳ ದುರಸ್ತಿ / ನಿರ್ವಹಣೆ ಮಾಡಲು ಸಿವಿಲ್ ಚೇಂಬರ್ ಕಟ್ಟಡದಲ್ಲಿ ಅವಕಾಶ ಕಲ್ಪಿಸಿರುವುದಿಲ್ಲ.<br>ಸದರಿ ಜಲಾಶಯದ ಕ್ರೆಸ್ಟ್ ಗೇಟ್‌ಗಳ ದುರಸ್ತಿ ಕಾರ್ಯಕ್ಕಾಗಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಕರ್ನಾಟಕ ನೀರಾವರಿ ನಿಗಮದಲ್ಲಿ ಪರಿಶೀಲನೆಯಲ್ಲಿರುತ್ತದೆ. |
| ಇ. | ಜಲಾಶಯದ ಗೇಟ್‌ಗಳು ದುರಸ್ತಿಯಾಗಿರುವುದು ಅಧಿಕಾರಿಗಳ ಗಮನಕ್ಕೆ ಬಂದಿರಲ್ಲಿಲ್ಲವೇ: ನೀರನ್ನು ತುಂಬಿಸುವ ಮುಂಚೆ ಈ ಗೇಟ್‌ಗಳ ದುರಸ್ತಿ ಕಾರ್ಯವನ್ನು ಕೈಗೊಳ್ಳದೇ ಇರುವುದು ಅಧಿಕಾರಿಗಳ ಬೇಜವಾಬ್ದಾರಿಯಲ್ಲವೇ; ಈಗ ತುಂಗಭದ್ರಾ ಜಲಾಶಯದಿಂದ ಬರುವ ನೀರು ಹರಿದು ಪೋಲಾಗುತ್ತಿರುವುದಕ್ಕೆ ಹೊಣೆಗಾರರು ಯಾರು ಈ ಬೇಜವಾಬ್ದಾರಿ ಅಧಿಕಾರಿಗಳ ಮೇಲೆ ಕ್ರಮಗಳನ್ನು ಕೈಗೊಳ್ಳಲು ಸರ್ಕಾರದ ನಿರ್ಧಾರಗಳೇನು? | |

ಜಸಂಇ 87 ಎಂಎಲ್‌ಎ 2023

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು